FIFTEENTH REPORT OF THE COMMITTEE OR PRIVATE MEMBERS' BILLS AND RESOLUTIONS PRESENTATION

Sri B. P. KADAM (Deputy Speaker).— Madam, I beg to present the Fifteenth Report of the Committee on Private Members' Bills and Resolutions.

MADAM SPEAKER.— The Report is presented.

Sri KAGODU THIMMAPPA (Sagar). Madam, I beg to move "That this Assembly agrees with the Fifteenth Report of the Committee on Private Members' Bills and Resolutions."

MADAM SPEAKER.— The question is that the Assembly agrees with the fifteenth report of the Committee on Private Members' Bills and Resolution".

The Motion was adopted.

VACANT POSTS OF TEACHERS IN HASSAN HIGH SCHOOLS

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ನಾನ್ಯ ಅಧ್ಯಕ್ಷರೇ—ನಾನು ತಮ್ಮ ಕಡೆಗೆ ಒಂದು ನೋಟೀಸನ್ನು ಅಂದರೆ ವಿದ್ಯಾ ಸಚಿವರಿಗೆ ಅದು ಸಂಬಂಧ ಪಟ್ಟದ್ದು ಕಳುಹಿಸಿದ್ದೆ. ಅದರ ಬಗ್ಗೆ ಎನೂ ತೀರ್ಮಾನವಾಗಲಿಲ್ಲ.

ಅಧ್ಯಕ್ಷರು.— ನೀವು ಕಳುಹಿದ್ದ ಸೂಚನೆಯನ್ನು ವಿದ್ಯಾಮಂತ್ರಿಗಳ ಆಫೀಸಿಗೆ ಕಳುಹಿಸಿದೆ. ಅಲ್ಲಿಂದ ಇನ್ನೂ ಉತ್ತರ ಬಂದಿಲ್ಲ....

ಶ್ರೀ ಕೆ. ಎಚ್. ಹನುಮೇಗೌಡ.— ಅಧ್ಯಕ್ಷರೇ : ವಿಚಾರ ಬಹಳ ಗಹನ ವಾದದ್ದು. ನಮ್ಮ ಹಾಸನ ಜಿಲ್ಲೆಯ ಅನೇಕ ಸರ್ಕಾರಿ, ತಾಲ್ಲೂಕ ಬೋರ್ಡು ಮತ್ತು ಇತರೇ ಖಾಸಗೀ ಹೈಸ್ಕೂಲುಗಳಲ್ಲಿ ಪಾಠಹೇಳತಕ್ಕ ಉಪಾಧ್ಯಾಯರುಗಳೇ ಇಲ್ಲ. ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಉಪಾಧ್ಯಾಯರೇ ಇಲ್ಲ ಎಂದರೆ ಹುಡುಗರು ಪರೀಕ್ಷೆಯಲ್ಲಿ ಪಾಸಾಗುವುದೆಲ್ಲಿದೆ? ಆ ಹುಡುಗರ ಗತಿಯೇನು? ಸರ್ಕಾರದವರನ್ನು ಕೇಳಿದರೆ ಎಕಾನಮಿ ಮೆಷರ್ಸ್ ಜಾರಿಯಲ್ಲಿರುವುದರಿಂದ ಯಾರನ್ನೂ ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ಸರಿಯೇ? ಈ ಪಾಠಪ್ರವಚನಗಳನ್ನು ನಡೆಸತಕ್ಕ ಉಪಾಧ್ಯಾಯ ವರ್ಗಕ್ಕೂ ಇದು ಅನ್ವಯವಾಗುತ್ತದೆಯೇ? ಮಾನ್ಯ ಸಚಿವರಿಲ್ಲೇ ಇದ್ದಾರೆ....

ಶ್ರೀ ಎ. ಆರ್. ಬದ್ರಿನಾರಾಯಣ (ವಿದ್ಯಾ ಶಾಖೆಯ ಮಂತ್ರಿಗಳು) — ಆ ವಿಷಯವೇನೆಂಬುದೇ ನನ್ನ ಗಮನಕ್ಕೆ ಬಂದಿಲ್ಲ....

ಅಧ್ಯಕ್ಷರು.— ನಿಮ್ಮ ಆಫೀಸಿಗೆ ಮಾನ್ಯ ಸದಸ್ಯರ ನೋಟೀಸನ್ನು ಕಳುಹಿಸಿದೆ.

There is no use of my giving an off-hand reply. I am taken by surprise.

2-00 P. M.

MADAM SPEAKER.— I have received the notice in this respect. That has been forwarded to your office. I am swaiting the reply.

ಶ್ರೀ ಕೆ. ಎಚ್. ಹನುಮೇಗೌಡ.— ಮಾನ್ಯ ಮಂತ್ರಿಗಳು ಸೋಮವಾರ ಉತ್ತರಕೊಡಲಿ.

ಅಧ್ಯಕ್ಷರು.— ಈ ರೀತಿ ಕೇಳುತ್ತಾ ಹೋದರೆ ಹೇಗೆ? ನನ್ನ ಜೊತೆಯಲ್ಲಿ ಜಗಳಮಾಡುತ್ತೀರೋ, ಅಥವಾ ಅವರ ಜೊತೆಯಲ್ಲಿ ಜಗಳ ಮಾಡುತ್ತೀರೋ ಏನೂ ಗೊತ್ತಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ನಾನು ಜಗಳವಾಡುತ್ತಾ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸದಸ್ಯರು ಮಕ್ಕಳ ದೃಷ್ಟಿಯಿಂದ ಮಾತ್ರ ಹೇಳುತ್ತಿದ್ದಾರೆ. ಅವರು ಜಗಳವಾಡುತ್ತಾ ಇಲ್ಲ.

Sri D. B. KALMANKAR.—I had given two call-attention notices one regarding the necessity of continuing the scarcity works in Gulbarga District and second, regarding the M. S. R. T. C. services in Gulbarga District, regarding which there are lots of complaints from passengers.

MADAM SPEAKER.— I do not know whether the Hon. member was here when an elaborate statement was made by the Finance Minister regarding scarcity works.

Sri D. B. KALMANKAR.— Regarding M. S. R. T. C. Madam?

MADAM SPEAKER.— I will see to it.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಈ ಅಧಿವೇಶನದ ಆರಂಭದಲ್ಲಿಯೂ ಮತ್ತು ಮುಂಜೆಯೂ ಅನೇಕ ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಕೆಲವಕ್ಕೆ ಉತ್ತರಗಳು ಬಂದಿವೆ ಮತ್ತೆ ಕೆಲವಕ್ಕೆ ಉತ್ತರಗಳು ಬಂದಿಲ್ಲ. ತಾವು ಈಗ ಕೇವಲ ಹತ್ತು ಹತ್ತು ಪ್ರಶ್ನೆಗಳನ್ನು ಪ್ರತಿದಿವಸ ಹಾಕುತ್ತಿದ್ದೀರಿ. ಪ್ರಶ್ನೋತ್ತರ ವೇಳೆ ಒಂದು ಗಂಟೆಕಾಲವಿದ್ದರೂ ಆ ಒಂದು ಗಂಟೆಯೊಳಗೆ ಎಲ್ಲಾ ಪ್ರಶ್ನೋತ್ತರಗಳೂ, ಕಾಲ್ ಅಟೆನಷನ್ ನೋಟೀಸಗಳಿಗೆ ಪ್ರಶ್ನೋತ್ತರಗಳು, ಪೇಪರ್ಸ್ ಲೇಯಿಂಗ್, ಬಿಲ್ಸೋ ಅವರ ಎಲ್ಲವೂ ಮುಗಿಯುತ್ತಿದೆ.

ಅಧ್ಯಕ್ಷರು.— ಬೀರೊ ಅವರ ಎಂದಿದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.— ಅದು ರೂಲ್ಸ್‌ನಲ್ಲಿಲ್ಲದಿದ್ದರೂ ಒಂದು ವಾಡಿಕೆಯಾಗಿದೆ. ನನ್ನ ಪ್ರಶ್ನೆಗಳು ಲ್ಯಾಪ್ಸ್‌ಆಗಿ ಹೋಗುತ್ತವೋ ಎನೋ ಎಂಬ ಸಂಶಯ ನನಗಿದೆ. ಆದ್ದರಿಂದ ಅವುಗಳ ಬಗ್ಗೆ ಜಾಗ್ರತೆಯಾಗಿ ಉತ್ತರವನ್ನು ಸರ್ಕಾರದಿಂದ ತರಿಸುವ ಹಾಗೆ ಮಾಡಬೇಕು.

ಅಧ್ಯಕ್ಷರು.— ಹಾಗಾದರೆ ೫೫ ಪ್ರಶ್ನೋತ್ತರಗಳನ್ನು ಹಾಕಲೇ ?

ಶ್ರೀ ಎಂ. ಎಸ್. ಕೃಷ್ಣನ್.— ಈಗ ಹತ್ತು ಪ್ರಶ್ನೆಗಳು ಇರುವುದನ್ನು ೧೫ ಪ್ರಶ್ನೆಗಳು ಬರುವಹಾಗೆ ನೋಡಿ.

INADEQUATE WORKS IN OLD MYSORE AREAS FOR WHICH PROVISION WAS MADE IN THE BUDGET

ಶ್ರೀ ಬಿ. ಪುಟ್ಟಸ್ವಾಮಯ್ಯ (ಸಿರಾ).— ಅಧ್ಯಕ್ಷರೇ, ಇವತ್ತು ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಹಣಕಾಸಿನ ಸಚಿವರು ಈ ಸಭೆಯಲ್ಲಿ ಇದ್ದಾರೆ. ಅವರ ಗಮನಕ್ಕೆ ನಾನು ಒಂದು ವಿಷಯವನ್ನು ತರಬೇಕಾಗಿದೆ. ಹಳೆಯ ಮೈಸೂರು ಭಾಗದಲ್ಲಿ ಏನು ಸರ್ಕಾರದವರು ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಿಗದಿಪಡಿಸಿದ್ದರೋ ಅದರಲ್ಲಿ ನಾನು ಹೇಳುವುದಾದರೆ ಶೇಕಡ ೯೦ಭಾಗದಷ್ಟು ಕಾಮಗಾರಿಗಳು ಇನ್ನೂ ಪ್ರಾರಂಭವೇ ಆಗಿಲ್ಲ. ಅನೇಕ ಕಾಮಗಾರಿಗಳಿಗೆ ಟೆಕ್ನಿಕಲ್ ಅಪ್ರೂವಲ್ ಆಗಿದ್ದರೂ ಅವಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿಲ್ಲವೆಂದು ಸೆಕ್ರೆಟೇರಿಯಟ್ಟಿನಲ್ಲಿಯೇ ಅನೇಕ ಎಸ್ಟಿಮೇಟುಗಳು ಕೊಳೆಯುತ್ತಿರುತ್ತಿವೆ. ಅಲ್ಲಿ ಯಾರನ್ನು ಕೇಳಿದರೂ ಹಣವಿಲ್ಲವೆಂದು ಹೇಳುತ್ತಾರೆ. ಆದ್ದರಿಂದಲೇ ಹಳೆಯ ಮೈಸೂರಿನ ಭಾಗದಲ್ಲಿ ಅನೇಕ ಕಾಮಗಾರಿಗಳು ಸ್ಥಗಿತವಾಗಿ ನಿಂತಿರುತ್ತವೆ. ಅನೇಕ ಜನರು ಇತರೇ ಕೋಪಗಳ ಜೊತೆಗೆ ಇದನ್ನೂ ಒಂದು ಸೇರಿಸಿಕೊಂಡಿದ್ದಾರೆ. ಈಗ ಇವರಿಬ್ಬರೂ ಇಲ್ಲಿ ಇರುವುದರಿಂದ ಅದರ ಬಗ್ಗೆ ವಿಚಾರಮಾಡಬೇಕು. ಕಾಮಗಾರಿಗಳು ಬಡ್ಜೆಟ್ಟಿನಲ್ಲಿ ಎನಿವೆಯೋ ಅವುಗಳ ಬಗ್ಗೆ ಎನಾಯಿತು ಎಂದು ಕೇಳಿದರೆ, ಸೆಕ್ರೆಟೇರಿಯಟ್ಟಿನಲ್ಲಿ ಇನ್ನೂ ಪುಂಜೂರಾಗಿಲ್ಲವೆಂದು ಹೇಳುತ್ತಾರೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲಿಗೆ ಮತ್ತು ಟೆಕ್ನಿಕಲ್ ಅಪ್ರೂವಲಗೋಸ್ಕರ ಅವು ಇಲ್ಲಿಯೇ ನಿಂತಿವೆಯೆಂದು ಹೇಳುತ್ತೀನೆ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೀನೆ. ಇದೇ ವಿಚಾರದಲ್ಲಿ ನಾನು ಹಿಂದಿನ ತಿಂಗಳು ೩೦ನೇ ತಾರೀಖಿನಲ್ಲಿ ಒಂದು ಕಾಲ್ ಅಟೆನಷನ್ ನೋಟೀಸನ್ನೂ ಕೂಡ ಕಳುಹಿಸಿದ್ದೇನೆ. ಆದ್ದರಿಂದ ತಾವು ನಿರ್ದಿಷ್ಟವಾಗಿ ಅಂತಹ ಕಾಲ್‌ಅಟೆನಷನ್ ನೋಟೀಸಗಳಿಗೆ ಇಷ್ಟೇ ದಿನಸಗಳಲ್ಲಿ ಉತ್ತರಗಳನ್ನು ಕೊಡಬೇಕೆಂದು ಒಂದು ಕಾಲಾವಧಿಯನ್ನು ನಿಗದಿಮಾಡಬೇಕೆಂದು ನಾನು ಹೇಳುತ್ತೀನೆ. ಮೈಸೂರಿನ ಜನರು ಉದ್ರಿಕ್ತರಾಗುವುದಕ್ಕೆ ಸರ್ಕಾರವೇ ಪ್ರೇರೇಪಣೆ ಮಾಡುತ್ತಿದೆ